ಉಪಾಧ್ಯಕ್ಷರು: ಮಂಡಿಸಲಾಯಿತು.

ಶ್ರೀ ಕೆ.ಪ್ರತಾಪ್‌ಚಂದ್ರ ಶೆಟ್ಟಿ: ಇಲ್ಲಿಯ ತನಕ ಲಿಖಿತದ ಮೂಲಕ ನೀಡುವ ಉತ್ತರವನ್ನು ಕೊಟ್ಟಿಲ್ಲ. ನಾವು ಯಾರನ್ನು ಕೇಳಬೇಕು? ನಾವು ಪ್ರಶ್ನೆಯನ್ನು ಕೇಳುವುದಾದರೂ ಏತಕ್ಕೆ? ಸರಿಯಾದ ಸಂದರ್ಭದಲ್ಲಿ ಉತ್ತರ ಕೊಡದೇ ಇರುವುದಕ್ಕೆ ಕಾರಣರು ಯಾರು?

ಉಪಾಧ್ಯಕ್ಷರು: ಉತ್ತರ ಬರಲಿಲ್ಲವೆಂದರೆ ಅದನ್ನು ಮುಟ್ಟಿಸುವ ಜವಾಬ್ದಾರಿ ನಮ್ಮದು. ಖಂಡಿತ ಮುಟ್ಟಿಸುವ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ರೂಲ್ಸ್ ಪ್ರಕಾರ 15 ದಿವಸದೊಳಗೆ ಅಟ್‌ಲೀಸ್ಟ್ ಅನ್ ಸ್ಟಾರ್ಡ್ ಪ್ರಶ್ನೆಗಳಿಗೆ ರಿಪ್ಲೈ ಕೊಡಬೇಕು. ಅದನ್ನು ಕೊಡಲಿಲ್ಲವೆಂದರೆ ನಾವು ಯಾರನ್ನು ಕೇಳಬೇಕು?

ಉಪಾಧ್ಯಕ್ಷರು: ಉತ್ತರವನ್ನು ಕೊಡಿಸುತ್ತೇನೆ.

ಶ್ರೀ ಕೆ.ಪ್ರತಾಪ್‌ಚಂದ್ರ ಶೆಟ್ಟಿ: ಕಳೆದ ಅಧಿವೇಶನದಲ್ಲಿ ಕೇಳಿದ ಪ್ರಶ್ನೆಗಳಿಗೆ ಉತ್ತರ ಸಹ ಬಂದಿಲ್ಲ. ಏಕೆ ಈ ವ್ಯವಸ್ಥೆಯಾಗಿದೆ ಎಂದು ನಿಮ್ಮ ಅಧಿಕಾರಿಗಳನ್ನು ಕೇಳಿ.

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಸಾರಿಗೆ ಸಚಿವರು): ಎಲ್ಲಾ ಮಂತ್ರಿಗಳು ಅಧಿವೇಶನ ಆದ ನಂತರ ಕೊಟ್ಟಿರತಕ್ಕಂಥ ಭರವಸೆಗಳನ್ನು ಮತ್ತು ಸಂಬಂಧಪಟ್ಟ ಫೈಲ್‌ಗಳನ್ನು ನೋಡಿ ಮತ್ತು ಸ್ಟಾರ್ಡ್ ಮತ್ತು ಅನ್‌ಸ್ಟಾರ್ಡ್ ಪ್ರಶ್ನೆಗಳಿಗೆ ಉತ್ತರವನ್ನು ಕಳುಹಿಸುವಂತಹ ವ್ಯವಸ್ಥೆಯನ್ನು ಮಾಡುತ್ತೇವೆ. ಆಕಸ್ಮಿಕವಾಗಿ ಈ ರೀತಿ ಇದ್ದರೆ ಇನ್ನು ನಾಲ್ಕೈದು ದಿವಸದಲ್ಲಿ ನಮ್ಮ ಇಲಾಖೆಗೆ ಸಂಬಂಧಪಟ್ಟ ಹಾಗೆ ಇರುವುದನ್ನೆಲ್ಲ ನೋಡಿ ಆದಷ್ಟು ಬೇಗ ಪರಿಹಾರ ಮಾಡುತ್ತೇವೆ.

(2) ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಡಿ.ಮಂಜುನಾಥ್ (ಅರಣ್ಯ ಸಚಿವರು) (ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿ) ಅವರ ಪರವಾಗಿ): ಮಾನ್ಯ ಉಪಾಧ್ಯಕ್ಷರೆ, ಭಾರತದ ನಿಯಂತ್ರಕರು ಹಾಗೂ ಮಹಾಲೇಖಪಾಲಕರವರು ನೀಡಿರುವ ಕರ್ನಾಟಕ ಸರ್ಕಾರದ 1997ನೇ ಸಾಲಿನ ಮಾರ್ಚ್ 31ರ ಅಂತ್ಯದವರೆಗೆ (ವಾಣಿಜ್ಯಕ್ಕೆ) ಸಂಬಂಧಿಸಿದ ಲೆಕ್ಕಪರಿಶೋಧನಾ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

I. ಶ್ರೀ ಡಿ.ಮಂಜುನಾಥ್ (ಅರಣ್ಯ ಸಚಿವರು) (ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿ) ಅವರ ಪರವಾಗಿ):

1978ರ ಕರ್ನಾಟಕ ನಾಗರೀಕ ಸೇವಾ ಅಧಿನಿಯಮದ 8 (3)ನೇ ಪ್ರಕರಣದ ಮೇರೆಗೆ

1. 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳ ಅನುಸೂಚಿ-IIಕ್ಕೆ ತಿದ್ದುಪಡಿ ಮಾಡಿರುವ ಸಂಬಂಧದಲ್ಲಿ ದಿನಾಂಕ 27-1-1998ರಂದು ಹೊರಡಿಸಲಾದ ಡಿಪಿಎಆರ್ 6 ಎಸ್‌ಡಿಇ 96ನೇ ಕ್ರಮಾಂಕದ ಅಧಿಸೂಚನೆ;

2. 1996ರ ಕರ್ನಾಟಕ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖಾ ಸೇವೆಗಳು (ವೃಂದ ಮತ್ತು ನೇಮಕಾತಿ) ನಿಯಮವನ್ನು ರಚಿಸಿರುವ ಸಂಬಂಧದಲ್ಲಿ ದಿನಾಂಕ 19-9-97ರಂದು ಹೊರಡಿಸಲಾದ ಡಿಪಿಎಆರ್ 46 ಎಸ್‌ಆರ್‌ಡಿ 96ನೇ ಕ್ರಮಾಂಕದ ಅಧಿಸೂಚನೆ;

3. 1997ರ ಕರ್ನಾಟಕ ಕಾರ್ಖಾನೆ ಮತ್ತು ಬಾಯ್ಲರ್‌ಗಳ ತಪಾಸಣೆ ಸೇವೆ (ವೃಂದ ಮತ್ತು ನೇಮಕಾತಿ) ನಿಯಮಗಳನ್ನು ತಿದ್ದುಪಡಿ ಮಾಡಿರುವ ಸಂಬಂಧದಲ್ಲಿ ದಿನಾಂಕ 21-6-97ರಂದು ಹೊರಡಿಸಲಾದ ಡಿಪಿಎಆರ್ 6 ಎಸ್‌ಆರ್‌ಡಿ 97ನೇ ಕ್ರಮಾಂಕದ ಅಧಿಸೂಚನೆ;

4. 1996-97ನೇ ಸಾಲಿನ ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ವಾರ್ಷಿಕ ಫರದಿಗಳನ್ನು ಮಂಡಿಸುತ್ತೇನೆ.

II. ಶ್ರೀ ಡಿ.ಮಂಜುನಾಥ್ (ಅರಣ್ಯ ಸಚಿವರು) (ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿ) ಅವರ ಪರವಾಗಿ): 1965ರ ಕರ್ನಾಟಕ ಅಬಕಾರಿ ಕಾಯ್ದೆಯ 71(4)ನೇ ಪ್ರಕರಣದ ಮೇರೆಗೆ; 1969ರ ಕರ್ನಾಟಕ ಅಬಕಾರಿ (ಸಾರಾಯಿ ಚಿಲ್ಲರೆ ಮಾರಾಟದ ಗುತ್ತಿಗೆ ಹಕ್ಕು) ನಿಯಮಗಳನ್ನು ತಿದ್ದುಪಡಿ ಮಾಡಿರುವ ಸಂಬಂಧದಲ್ಲಿ ದಿನಾಂಕ 1-1-98ರಂದು ಹೊರಡಿಸಲಾದ ಎಫ್‌ಡಿ 10 ಪಿಇಎಸ್ 97ನೇ ಕ್ರಮಾಂಕದ ಅಧಿಸೂಚನೆಯನ್ನು ಮಂಡಿಸುತ್ತೇನೆ.

III. ಶ್ರೀ ಡಿ.ಮಂಜುನಾಥ್ (ಅರಣ್ಯ ಸಚಿವರು) (ಎಂ.ಪಿ.ಪ್ರಕಾಶ್ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿ) ಅವರ ಪರವಾಗಿ):

1993ರ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮದ 320ನೇ ಪ್ರಕರಣದ ಮೇರೆಗೆ;

1. 1998ರ ಕರ್ನಾಟಕ ಪಂಚಾಯತ್‌ರಾಜ್ (ಚುನಾವಣೆಗಳನ್ನು ನಡೆಸುವಿಕೆ) ತಿದ್ದುಪಡಿ ನಿಯಮಗಳನ್ನು ರಚಿಸಿರುವ ಸಂಬಂಧದಲ್ಲಿ ದಿನಾಂಕ 23-3-98ರಂದು ಹೊರಡಿಸಲಾದ ಗ್ರಾಅಪ-131-ಗ್ರಾಪಸ-96ನೇ ಕ್ರಮಾಂಕದ ಅಧಿಸೂಚನೆ; 1993ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದ 262(3)ನೇ ಪ್ರಕರಣದ ಮೇರೆಗೆ;

2. 1995-96ನೇ ಸಾಲಿನ ಬೆಂಗಳೂರು (ಗ್ರಾಮಾಂತರ) ಜಿಲ್ಲಾ ಪಂಚಾಯತ್‌ನ ಲೆಕ್ಕಗಳ ಮೇಲಿನ ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ.

IV. ಶ್ರೀ ಡಿ.ಮಂಜುನಾಥ್ (ಅರಣ್ಯ ಸಚಿವರು) (ಬಿ.ಎನ್.ಬಚ್ಚೇಗೌಡ (ನಗರಾಭಿವೃದ್ಧಿ ಮಂತ್ರಿ) ಅವರ ಪರವಾಗಿ):

1987ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮದ 48(5)ನೇ ಪ್ರಕರಣದ ಮೇರೆಗೆ;

1. 1996-97ನೇ ಸಾಲಿನ ಕಾರವಾರ ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕ ಪರಿಶೋಧನಾ ವರದಿ;

2. 1996-97ನೇ ಸಾಲಿನ ಗುಲ್ಬರ್ಗಾ ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕಪರಿಶೋಧನಾ ವರದಿ;

1987ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮದ 49ನೇ ಪ್ರಕರಣದ ಮೇರೆಗೆ;

3. 1996-97ನೇ ಸಾಲಿನ ದಾವಣಗೆರೆ ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ವರದಿ;

4. 1995-96 ಹಾಗೂ 1996-97ನೇ ಸಾಲುಗಳ ಕಾರವಾರ ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ಆಡಳಿತ ವರದಿಗಳು;

5. 1995-96ನೇ ಸಾಲಿನ ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ವರದಿ;

6. 1997-98 (1-4-1996ರಿಂದ 31-3-1997 ಹಾಗೂ 1-4-1997ರಿಂದ 31-12-1997)ನೇ ಸಾಲಿನ ಗುಲ್ಬರ್ಗಾ ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ವರದಿಗಳನ್ನು ಮಂಡಿಸುತ್ತೇನೆ.

V. ಶ್ರೀ ಡಿ.ಮಂಜುನಾಥ್ (ಅರಣ್ಯ ಸಚಿವರು) (ಬಿ.ಸೋಮಶೇಖರ್ (ಕಂದಾಯ ಮಂತ್ರಿ ಅವರ ಪರವಾಗಿ):

1964ರ ಕರ್ನಾಟಕ ಭೂ ಕಂದಾಯ ಅಧಿನಿಯಮದ 194 (1) (11)ನೇ ಪ್ರಕರಣದ ಮೇರೆಗೆ;

1. ಬೆಳಗಾಂ ಜಿಲ್ಲೆಯ ಗೋಕಾಕ್ ತಾಲ್ಲೂಕಿನ 9 ಗ್ರಾಮಗಳ 1995-96ನೇ ಸಾಲಿನ

ಭೂ ಕಂದಾಯ 4,935.36 ರೂ.ಗಳನ್ನು ಮನ್ನಾ ಮಾಡಿರುವ ಸಂಬಂಧದಲ್ಲಿ ದಿನಾಂಕ 20-3-98ರಂದು ಹೊರಡಿಸಲಾದ ಆರಡಿ 163 ಟಿಆರ್‌ಎಂ 97ನೇ ಕ್ರಮಾಂಕದ ಅಧಿಸೂಚನೆ;

2. ಧಾರವಾಡ ಜಿಲ್ಲೆಯ ರಾಣೆಬೆನ್ನೂರು ತಾಲ್ಲೂಕಿನ 18 ಗ್ರಾಮಗಳ 1992-93ನೇ ಸಾಲಿನ ಭೂ ಕಂದಾಯ 16,967.02 ರೂ.ಗಳನ್ನು ಮನ್ನಾ ಮಾಡಿರುವ ಸಂಬಂಧದಲ್ಲಿ ದಿನಾಂಕ 20-3-1998ರಂದು ಹೊರಡಿಸಲಾದ ಆರ್‌ಡಿ 211 ಟಿಆರ್‌ಎಂ 96ನೇ ಕ್ರಮಾಂಕದ ಅಧಿಸೂಚನೆ;

1957ರ ಕರ್ನಾಟಕ ಮುದ್ರಾಂಕ ಅಧಿನಿಯಮದ 9(2)ನೇ ಪ್ರಕರಣದ ಮೇರೆಗೆ;

3. ಗ್ರಾಮೀಣ ಜ್ಞಾನ ಜ್ಯೋತಿ ವಿದ್ಯಾ ಸಂಸ್ಥೆ (ರಿ), ಲಿಂಗದೇವರ ಕೊಪ್ಪ, ಹಿರೇಕೆರೂರ ತಾಲ್ಲೂಕು, ಧಾರವಾಡ ಜಿಲ್ಲೆ ಇದಕ್ಕೆ ಲಿಂಗದೇವರ ಕೊಪ್ಪ ಗ್ರಾಮದ ಶ್ರೀ ಬಸವಣ್ಣೆಪ್ಪ ಶಂಕರಪ್ಪ ಪೂಜಾರ ಇವರು ದಾನವಾಗಿ ನೀಡುವ ಸರ್ವೆ ನಂಬರು 258:1ರ 3ಎಕರೆ 20 ಗುಂಟೆ ಜಮೀನಿನ ದಾನಪತ್ರದ ನೋಂದಣಿಗೆ ತಗಲುವ ಮುದ್ರಾಂಕ ಶುಲ್ಕಕ್ಕೆ ವಿನಾಯಿತಿ ನೀಡಿರುವ ಸಂಬಂಧದಲ್ಲಿ ದಿನಾಂಕ 25-2-1997ರಂದು ಹೊರಡಿಸಲಾದ ಕಇ 547 ಮುನೋಮು 95ನೇ ಕ್ರಮಾಂಕದ ಆದೇಶ;

4. ಕೃಷ್ಣಾ ಭಾಗ್ಯ ಜಲ ನಿಗಮವು ತನಗೆ ಸೇರಿದ 1178.00 ಕೋಟಿ ರೂ.ಗಳ ಆಸ್ತಿಯನ್ನು ಐ.ಸಿ.ಐ. ಸಿ.ಐ. ಹಣಕಾಸು ಸಂಸ್ಥೆಗೆ ಬರೆದುಕೊಡುವ ಮಾರ್ಟ್‌ಗೇಜ್ ಪತ್ರವನ್ನು ನೋಂದಣಿ ಮಾಡಿಸುವಾಗ ತಗಲಬಹುದಾದ ಮುದ್ರಾಂಕ ಶುಲ್ಕದಲ್ಲಿ 1.50 ಲಕ್ಷ ರೂ.ಗಳ ನಾಮಿನಲ್ ಮುದ್ರಾಂಕ ಶುಲ್ಕವನ್ನು ಮಾತ್ರ ವಿಧಿಸಿ ಉಳಿದ ಮುದ್ರಾಂಕ ಶುಲ್ಕಕ್ಕೆ ವಿನಾಯಿತಿ ನೀಡಿರುವ ಸಂಬಂಧದಲ್ಲಿ ದಿನಾಂಕ 9-6-1997ರಂದು ಹೊರಡಿಸಲಾದ ಕಂಇ 399 ಮುನೋಮು 96ನೇ ಕ್ರಮಾಂಕದ ಆದೇಶಗಳನ್ನು ಮಂಡಿಸುತ್ತೇನೆ.

VI. ಶ್ರೀ ಡಿ.ಮಂಜುನಾಥ್ (ಅರಣ್ಯ ಸಚಿವರು) (ಬಿ.ಎ.ಮೊಯಿದ್ದೀನ್ (ಸಣ್ಣ ಪ್ರಮಾಣದ ಕೈಗಾರಿಕೆಗಳ ಮಂತ್ರಿ) ಅವರ ಪರವಾಗಿ):

1956ರ ಕಂಪೆನಿಗಳ ಕಾಯ್ದೆಯ 619ಎ ಪ್ರಕರಣದ ಮೇರೆಗೆ;

1. 1996-97ನೇ ಸಾಲಿನ ಕರ್ನಾಟಕ ಸಣ್ಣ ಕೈಗಾರಿಕೆಗಳ ಮಾರುಕಟ್ಟೆ ನಿಗಮ ನಿಯಮಿತದ 13ನೇ ವಾರ್ಷಿಕ ವರದಿ (ವಿಮರ್ಶಾತ್ಮಕ ಟಿಪ್ಪಣಿಯೊಂದಿಗೆ)

2. 1996-97ನೇ ಸಾಲಿನ ಮೈಸೂರು ಪೇಪರ್ ಮಿಲ್ಸ್ ನಿಯಮಿತದ 62ನೇ

ವಾರ್ಷಿಕ ವರದಿ;

3. 1996-97ನೇ ಸಾಲಿನ ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತದ 21ನೇ ವಾರ್ಷಿಕ ವರದಿ;

4. 1996-97ನೇ ಸಾಲಿನ ಎನ್.ಜಿ.ಇ.ಎಫ್. ನಿಯಮಿತದ 32ನೇ ವಾರ್ಷಿಕ ವರದಿ ಮತ್ತು ಲೆಕ್ಕಪತ್ರ;

5. 1996-97ನೇ ಸಾಲಿನ ಮೈಸೂರು ಲ್ಯಾಂಪ್ ವರ್ಕ್ಸ್ ನಿಯಮಿತದ 61ನೇ ವಾರ್ಷಿಕ ವರದಿಗಳನ್ನು ಮಂಡಿಸುತ್ತೇನೆ.

VII. ಶ್ರೀ ಡಿ.ಮಂಜುನಾಥ್ (ಅರಣ್ಯ ಸಚಿವರು) (ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಹಾಗೂ ಸಂಸ್ಕೃತಿ ರಾಜ್ಯ ಮಂತ್ರಿ) ಅವರ ಪರವಾಗಿ):

1956ರ ಕಂಪೆನಿಗಳ ಕಾಯ್ದೆಯ 619ಎ ಪ್ರಕರಣ ಮೇರೆಗೆ;

1996-97ನೇ ಸಾಲಿನ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತದ 27ನೇ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

VIII. ಶ್ರೀ ಡಿ.ಮಂಜುನಾಥ್ (ಅರಣ್ಯ ಸಚಿವರು) (ಕೆ.ಜಯಪ್ರಕಾಶ್ ಹೆಗ್ಡೆ (ಮಿನುಗಾರಿಕಾ ಹಾಗೂ ಬಂದರು ರಾಜ್ಯ ಮಂತ್ರಿ) ಅವರ ಪರವಾಗಿ):

1956ರ ಕಂಪೆನಿಗಳ ಕಾಯ್ದೆಯ 619ಎ ಪ್ರಕರಣದ ಮೇರೆಗೆ;

1988-89, 1989-90 ಹಾಗೂ 1990-91ನೇ ಸಾಲುಗಳ ಕರ್ನಾಟಕ ಒಳನಾಡು ಮೀನುಗಾರಿಕೆ ಅಭಿವೃದ್ಧಿ ನಿಗಮ ನಿಯಮಿತದ 4, 5, ಹಾಗೂ 6ನೇ ವಾರ್ಷಿಕ ವರದಿಗಳು ಮತ್ತು ಲೆಕ್ಕಪತ್ರಗಳನ್ನು ಮಂಡಿಸುತ್ತೇನೆ.

XI ಶ್ರೀ ಡಿ.ಮಂಜುನಾಥ್ (ಅರಣ್ಯ ಸಚಿವರು) (ಶಿವಣ್ಣನವರ್ ಬಸವರಾಜಪ್ಪ ನೀಲಪ್ಪ (ಪರಿಸರ, ಜೀವಿಶಾಸ್ತ್ರ, ವಿಜ್ಞಾನ ಹಾಗೂ ತಂತ್ರಜ್ಞಾನ ಮತ್ತು ಸಾಂಪ್ರದಾಯಕವಲ್ಲದ ಇಂಧನ ರಾಜ್ಯ ಮಂತ್ರಿ) ಅವರ ಪರವಾಗಿ):

1974ರ ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆಯ 39(2)ನೇ ಪ್ರಕರಣದ ಮೇರೆಗೆ;

1996-97ನೇ ಸಾಲಿನ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

ಉಪಾಧ್ಯಕ್ಷರು: ಮಂಡಿಸಲಾಯಿತು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಕಾಗದ ಪತ್ರಗಳನ್ನು ಯಾರಾದರೂ ಮಂತ್ರಿಗಳು ಮಂಡಿಸಿದರೆ ನಮ್ಮ ಆಕ್ಷೇಪಣೆ ಇಲ್ಲ. ಆದರೆ ಸಂಬಂಧಪಟ್ಟವರು ಬಂದಿದ್ದಾಗ, ಹೇಳಿಯಾದರೂ ಹೋಗಬೇಕಲ್ಲಾ. ಸಂಬಂಧಪಟ್ಟ ಮಂತ್ರಿಗಳು ಇಲ್ಲದೇ ಇರತಕ್ಕಂಥ ಸಂದರ್ಭದಲ್ಲಿ ಬೇರೆಯವರು ಹೇಳಲಿ, ಆದರೆ ಕೆಲವರು ಇದ್ದರೂ ಸಹ ಹೊರಕ್ಕೆ ಎದ್ದು ಹೋಗಿರುತ್ತಾರೆ.

3. ವರದಿಯನ್ನು ಒಪ್ಪಿಸುವುದು

ಶ್ರೀ ಪಿ.ಎಸ್.ಕೌಜಲಗಿ (ಅಧ್ಯಕ್ಷರು, ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ): ಮಾನ್ಯ ಉಪಾಧ್ಯಕ್ಷರೆ, ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಅಧ್ಯಕ್ಷನಾದ ನಾನು, ನೀರಾವರಿ ಇಲಾಖೆಗೆ ಸಂಬಂಧಪಟ್ಟ ಹಾಗೆ ಸಮಿತಿಯ 35ನೇ ವರದಿಯನ್ನು ಈ ದಿನ ಸದನದಲ್ಲಿ ಮಂಡಿಸುತ್ತೇನೆ.

ಉಪಾಧ್ಯಕ್ಷರು: ವರದಿಯನ್ನೊಪ್ಪಿಸಲಾಯಿತು.

4. ಉಪಾಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

(ಅ) ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆ .

ಶ್ರೀ ಬಿ.ಎಸ್.ಯಡಿಯೂರಪ್ಪ: ಕುಡಿಯುವ ನೀರಿನ ಬಗ್ಗೆ ಮತ್ತು ಕೃಷ್ಣಾ ಬೇಸಿನ್ ವಿಷಯದ ಬಗ್ಗೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಲು ಬರೆದುಕೊಟ್ಟಿದ್ದೇವೆ.

ಉಪಾಧ್ಯಕ್ಷರು: ಶೂನ್ಯ ವೇಳೆಯಲ್ಲಿ ಎರಡೆರಡು ನಿಮಿಷ ಮಾತನಾಡುವುದಾದರೆ ಶೂನ್ಯ ವೇಳೆಯನ್ನು ತೆಗೆದುಕೊಳ್ಳೋಣ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಿಮಗೆ ಅಗತ್ಯ ಇದ್ದರೆ ಕೊಡಿ, ಇಲ್ಲದಿದ್ದರೆ ಬೇಡ. ಇವತ್ತು ಬಾಗಲಕೋಟೆಯಲ್ಲಿ, ಮಾನ್ಯ ಬಿ.ಎಸ್.ಪಾಟೀಲ್ ಮನಗೋಳಿ ಮತ್ತು ಜೆ.ಟಿ.ಪಾಟೀಲರು, ಆಮರಣಾಂತರ ಉಪವಾಸ ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ. ಇದನ್ನು ನಮ್ಮ ಸದನದಲ್ಲಿ ಪ್ರಸ್ತಾಪ ಮಾಡದೇ ಇದ್ದರೆ ನಮ್ಮ ಕರ್ತವ್ಯಕ್ಕೆ ಲೋಪ ಆಗುವುದಿಲ್ಲವೆ?

ಶ್ರೀ ರಾಜಶೇಖರ್ ವಿ.ಶೀಲವಂತ: ನಮ್ಮ ಜಿಲ್ಲೆಯಲ್ಲಿ ಇದು ಬಹಳ ಗಂಭೀರವಾದ ಸಮಸ್ಯೆಯಾಗಿದೆ, ಆದ್ದರಿಂದ ದಯವಿಟ್ಟು ಚರ್ಚೆಗೆ ಅವಕಾಶ ಮಾಡಿಕೊಡಬೇಕು.

ಉಪಾಧ್ಯಕ್ಷರು: ಎರಡು ವಿಷಯದ ಬಗ್ಗೆ ಚರ್ಚೆಗೆ ತೆಗೆದುಕೊಳ್ಳೋಣ.